ಇಲ್ಲಿಯವರೆಗೆ 5 ವಾಹನಗಳನ್ನು ನೀಡಲಾಗಿದೆ. ಮಿಕ್ಕ ವಾಹನಗಳನ್ನು ಮಾರ್ಚ್–14 ರ ಅಂತ್ಯದೊಳಗಾಗಿ ಒದಗಿಸಲಾಗುವುದು. ಅಲ್ಲದೇ 2014–15 ನೇ ಸಾಲಿನಲ್ಲಿ ಗ್ರಾಮಾಂತರ ಸಾರಿಗೆಯ ಜೊತೆಗೆ ನಗರ ಸಾರಿಗೆ ವಾಹನಗಳನ್ನು ಪೂರೈಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಹೊಸ ಪಡಿತರ ಚೀಟಿ

845(1172); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಇದುವರೆವಿಗೂ ಹೊಸ ಪಡಿತರ ಕಾರ್ಡುಗಳ ವಿತರಣೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ವಿತರಣೆಗೆ ಸರ್ಕಾರ ಕ್ರಮಕೈಗೊಳ್ಳುವುದೆ;

ಇ) ಹೊಸ ಪಡಿತರ ಚೀಟಿಗಳಿಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿ ಸ್ಥಾಪನೆಗೆ ಸರ್ಕಾರ ರೂಪಿಸಿರುವ ನಿಯಮಾವಳಿಗಳೇನು (ವಿವರಗಳನ್ನೊದಗಿಸುವುದು)

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ರಾಜ್ಯ ಸಚಿವರು)

ಅ) ಹೌದು,

ಆ) ಪಡಿತರ ಚೀಟಿಗಾಗಿ ಬಂದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಶೀಘ್ರ ಕ್ರಮವಹಿಸಲಾಗುತ್ತಿದೆ. ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಹಿರೇಕೆರೂರು ತಾಲೂಕಿನಲ್ಲಿ ಹೊಸ ಪಡಿತರ ಕಾರ್ಡುಗಳ ಪರಿಶೀಲನೆ ಹಾಗೂ ವಿತರಣೆ ಕಾರ್ಯ ಪ್ರಗತಿಯಲ್ಲಿದೆ.

ತಾಲ್ಲೂಕು	ಸ್ವೀಕರಿಸಿದ ಅರ್ಜಿ ಸಂಖ್ಯೆ	ಪರಿಶೀಲಿಸಿದ ಅರ್ಜಿಗಳು	ತಿರಸ್ಕರಿಸಿದ ಅರ್ಜಿಗಳು	ಮುದ್ರಿಸಿದ ಪಡಿತರ ಚೀಟಿಗಳು	ಮುದ್ರಿಸಿ ವಿತರಿಸಲು ಸಿದ್ಧವಿರುವ ಪಡಿತರ ಚೀಟಿಗಳು	ವಿತರಿಸಿದ ಪಡಿತರ ಚೀಟಿಗಳು
ಹಿರೇಕೆರೂರು	14449	11780	1268	2864	1865	999

ಇ) ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ)ನಿಯಂತ್ರಣ ಆದೇಶ 1992ರ ಕ್ಲಾಸ್ 11(2)ರಂತೆ ಗ್ರಾಮಾಂತರ ಪ್ರದೇಶದಲ್ಲಿ 300 ಪಡಿತರ ಚೀಟಿ, ನಗರ ಪ್ರದೇಶದಲ್ಲಿ 500 ಪಡಿತರ ಚೀಟಿಗಳಿಗೆ ಒಂದು ನ್ಯಾಯಬೆಲೆ ಅಂಗಡಿ ತೆರೆಯಲಾಗುವುದು. ಹಾಗೂ ವಿಶೇಷ ಪ್ರಕರಣಗಳಲ್ಲಿ ಅಗತ್ಯ ಕಂಡುಬಂದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 200 ಪಡಿತರ ಚೀಟಿಗಳಿಗೆ ಮತ್ತು ನಗರ ಪ್ರದೇಶದಲ್ಲಿ 300 ಪಡಿತರ ಚೀಟಿಗಳಿಗೆ ನ್ಯಾಯಬೆಲೆ ಅಂಗಡಿ ತೆರೆಯಲಾಗುವುದು. **No.CFS/PD/IV/FPD/09/2012-13**ರ ಸುತ್ತೋಲೆಯಂತೆ ಹೊಸ ಪಡಿತರ ಚೀಟಿಗಳಿಗೆ ಅನುಗುಣವಾಗಿ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಸರ್ಕಾರಿ ಸಂಸ್ಥೆಯಾದ ಕೆಎಫ್‌ಸಿಎಸ್‌ಸಿ ಇವರಿಗೆ ಪ್ರಥಮ ಆದ್ಯತೆ ನೀಡಲಾಗಿದೆ. ನಂತರ ಸಹಕಾರ ಸಂಘಗಳಾದ ಟಿಎಪಿಸಿಎಂಎಸ್/ವಿಎಸ್‌ಎಸ್‌ಎನ್/ಪಿಎಸಿ ಸಂಘಗಳಿಂದ ಅರ್ಜಿ ಕರೆದು ಆದ್ಯತೆಯನುಸಾರ ಹೊಸ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗುವುದು.